
# ಅಡಿಕೆಯಲ್ಲಿ ಬರುವ ಕೀಟಗಳು ಮತ್ತು ಅವುಗಳ ನಿರ್ವಹಣೆ

## ಜೇಡ ಜಾತಿಯ ಹುಳು



**ಲಕ್ಷಣಗಳು**

- ಈ ಕೀಟಗಳು ಅಡಿಕೆ ಎಲೆಯ ಕೆಳ ಭಾಗದಲ್ಲಿ ಬಿಳಿ ಜೇಡರ ಬಲೆಯೊಳಗೆ ಕಂಡು ಬರುತ್ತವೆ;
- ಎಲೆಗಳ ಮೇಲೆ ಹಳದಿ ಬಣ್ಣದ ಮಚ್ಚೆ ಅಥವಾ ಕಲೆಗಳು ಕಂಡು ಬರುತ್ತವೆ

**ನಿರ್ವಹಣೆ**

- ತೀವ್ರವಾಗಿ ಬಾಧಿಸಿದ ಮತ್ತು ಒಣಗಿರುವ ಎಲೆಗಳನ್ನು ಕತ್ತರಿಸಿ ಸುಟ್ಟು ಹಾಕಬೇಕು
- ಸಸಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ನೀರು ಮತ್ತು ನೆರಳನ್ನು ಒದಗಿಸಬೇಕು. ಪರೋಪಕಾರಿ ಜೀವಿಗಳಾದ ಆ್ಯಂಬ್ಲಿಸಿಯಸ್ ನುಸಿ, ಕಾಕ್ಸಿನೆಲ್ಲಿಡ್ ದುಂಬಿ ಮತ್ತು ನ್ಯೂರೇಪ್ಟಾರಾನ್ ಕೀಟಗಳು ಈ ಹುಳವನ್ನು ತಿನ್ನುವುದರಿಂದ ಅವುಗಳನ್ನು ಸಂರಕ್ಷಿಸಬೇಕು

## ತಿಗಣೆ ಜಾತಿಯ ಕೀಟ





**ಲಕ್ಷಣಗಳು**

- ಎಳೆಯ ಕಾಯಿ ಉದುರುವುದು ಮತ್ತು ಬಿದ್ದಂತಹ ಎಳೆಯ ಕಾಯಿಗಳ ತೊಟ್ಟಿನ ಕೆಳ ಭಾಗದಲ್ಲಿ ಸೂಜಿಯಿಂದ ಚುಚ್ಚಿದಂತಹ ಕಪ್ಪು ಬಣ್ಣದ ಚುಕ್ಕೆಗಳು ಕಂಡು ಬರುತ್ತದೆ.

**ನಿರ್ವಹಣೆ**

- ಬೇವಿನ ಎಣ್ಣೆಯನ್ನು ಶೇಕಡಾ 0.5 ರಷ್ಟರ (1 ಲೀಟರ್ ನೀರಿನಲ್ಲಿ 5 ಮಿ.ಲೀ) ಪ್ರಮಾಣದಲ್ಲಿ ಎರಡು ಸಲ 15 ದಿನದ ಅಂತರದಲ್ಲಿ ಎಳೆಯ ಕಾಯಿ ಗೊನೆಗೆ ಸಿಂಪಡಿಸಬೇಕು

## ಸುಳಿ/ತಿರಿ ತಿಗಣೆ



**ಲಕ್ಷಣಗಳು**

- ಕಿರಿಯ ಮತ್ತು ಪ್ರೌಢ ತಿಗಣೆಗಳು ಸುಳಿಗಳ ಒಳ ಭಾಗದಲ್ಲಿ ವಾಸವಾಗಿ ಎಳೆಯ ಎಲೆಗಳ ರಸ ಹೀರಿ ಬೆಳೆಯುತ್ತವೆ
- ಹೊಸದಾಗಿ ತೆರೆದುಕೊಳ್ಳುವ ಎಲೆಯ ಮೇಲೆ ಸಣ್ಣ ಸಣ್ಣ ಚುಕ್ಕೆಗಳು ಕಂಡು ಬರುವುದು

**ನಿರ್ವಹಣೆ**

- ಅಡಿಕೆ ತೋಟದಲ್ಲಿ ನೆರಳಿನ ನಿಯಂತ್ರಣ ಮಾಡಬೇಕು
- ಎರಡು ಗ್ರಾಂ. ನಷ್ಟು ಥಯಮಿಥಾಕ್ಸನ್ 25 ಡಬ್ಲ್ಯು. ಜಿ. ಕೀಟನಾಶಕವನ್ನು ಸಣ್ಣ ರಂಧ್ರ ಮಾಡಿದ 5 ಸೆಂ.ಮೀ. X 3 ಸೆಂ.ಮೀ. ಗಾತ್ರದ ಚಿಕ್ಕ ಪಾಲಿಥಿನ್ ಚೀಲದಲ್ಲಿ ಹಾಕಿ ಅಡಿಕೆ ಮರದ/ಸಸಿಯ ಸುಳಿಯ ಹತ್ತಿರ ಎಪ್ರಿಲ್–ಮೇ ತಿಂಗಳಲ್ಲಿ ಇಡಬೇಕು. ಹೊಸ ಎಲೆಗಳು ಹೊರ ಹೊಮ್ಮುವಾಗ ಪುನಃ ಹೊಸ ಸುಳಿ/ ತಿರಿ ಹತ್ತಿರ ಇಡತಕ್ಕದ್ದು

## ಕಜ್ಜಿ ಕೀಟ



**ಲಕ್ಷಣಗಳು**

- ಈ ಕೀಟಗಳು ಅಡಿಕೆಯ ಕಾಯಿ, ಗೊನೆ ಮತ್ತು ಎಲೆಗಳ ರಸ ಹೀರುತ್ತವೆ. ರಸ ಹೀರುವಿಕೆ ಹೆಚ್ಚಾದಾಗ ಆ ಭಾಗಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ ಹಾಗೂ ಕಾಯಿಗಳು ಉದುರುತ್ತವೆ ಮಣ್ಣಿನಲ್ಲಿ ತೇವಾಂಶ ಕಡಿಮೆಯಿರುವಾಗ ತೋಟಗಳಲ್ಲಿ ಇವುಗಳ ಬಾಧೆ ಹೆಚ್ಚು

**ನಿರ್ವಹಣೆ**

- ತೋಟದಲ್ಲಿ ನೆರಳಿನ ನಿಯಂತ್ರಣ ಮಾಡಬೇಕು
  ಒಂದು ಬಗೆಯ ಗುಲಗಂಜಿ ಹುಳು (ಲೇಡಿ ಬರ್ಡ್ ಬೀಟಲ್) ಈ ಕೀಟವನ್ನು ತಿನ್ನುವುದರಿಂದ ಅವುಗಳನ್ನು ಸಂರಕ್ಷಿಸಬೇಕು
- ಬೇವಿನ ಎಣ್ಣೆಯನ್ನು ಶೇಕಡಾ 0.5 ರಷ್ಟರ (1 ಲೀಟರ್ ನೀರಿನಲ್ಲಿ 5 ಮಿ.ಲೀ) ಪ್ರಮಾಣದಲ್ಲಿ ಎರಡು ಸಲ 15–20 ದಿನಗಳ ಅಂತರದಲ್ಲಿ ಸಿಂಪಡಿಸಬೇಕು

## ಬೇರು ಹುಳ



**ಲಕ್ಷಣಗಳು**

- ಈ ಹುಳುಗಳು ಬೆಳೆಯುತ್ತಿರುವ ಬೇರುಗಳನ್ನು ತಿನ್ನುತ್ತವೆ. ಎಲ್ಲಾ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಕಾಂಡವು ತೆಳುವಾಗುತ್ತಾ; ಗಿಡಗಳು ರೋಗ ಗ್ರಸ್ಥವಾದಂತೆ ಕಂಡು ಬರುವುದಲ್ಲದೇ ಇಳುವರಿ ಕೂಡಾ ಕಡಿಮೆಯಾಗುತ್ತದೆ

**ನಿರ್ವಹಣೆ**

- ಮುಂಗಾರು ಪ್ರಾರಂಭವಾದ ಮೊದಲ ಎರಡು ವಾರ ಸಂಜೆ 6.30 ರಿಂದ 7.30 ರ ಸಮಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದುಂಬಿಗಳು ಮಣ್ಣಿನಿಂದ ಹೊರ ಬರುವ ದುಂಬಿಗಳು ಸಂಗ್ರಹಿಸಿ ನಾಶಪಡಿಸಬೇಕು
- ಅಡಿಕೆ ತೋಟಗಳಲ್ಲಿ ಸಮರ್ಪಕವಾಗಿ ಬಸಿಗಾಲುವೆಗಳನ್ನು ನಿರ್ಮಿಸಬೇಕು. ಬೇವಿನ ಹಿಂಡಿಯನ್ನು 2 ಕೆ.ಜಿ. ಯಂತೆ ಮಳೆಗಾಲ ಮುಗಿದ ನಂತರ ಮಣ್ಣಿಗೆ ಸೇರಿಸುವುದರಿಂದ ಬೇರು ಹುಳುಗಳು ಬೇರುಗಳನ್ನು ತಿನ್ನದಂತೆ ರಕ್ಷಿಸುವುದಲ್ಲದೆ ಹೊಸ ಬೇರು ಬೆಳೆಯಲು ಸಹಾಯ ಮಾಡುತ್ತದೆ
- ಕೀಟ ಬಕ್ಷಕ ಜಂತುಹುಳುವಾದ, ಸ್ಟೀನರ್‌ನಿಮ ಕಾರ್ಪೋಕ್ಯಾಪ್ಸೆಯನ್ನು ದ್ರವರೂಪದಲ್ಲಿ ಒಂದು ಹೆಕ್ಟೇರ್‌ಗೆ 1.5 ಬಿಲಿಯನ್‌ನಷ್ಟು ಜಂತು ಹುಳುಗಳು (50 ರಿಂದ 60 ಲಕ್ಷ ಪ್ರತಿ ಮರಕ್ಕೆ) ಜೂನ್ – ಜುಲೈ ತಿಂಗಳಲ್ಲಿ ನೀಡಬೇಕು. ಎರಡನೇ ಬಾರಿ, ಈ ಜಂತು ಹುಳುಗಳನ್ನು ಇಮಿಡಾಕ್ಲೋಪ್ರಿಡ್ 17.8 ಎಸ್.ಎಲ್ @ 0.0045 % ಅನ್ನು (0.5 ಮಿ.ಲೀ. ಪ್ರತಿ ಎರಡು ಲೀಟರ್ ನೀರಿಗೆ) ಕೀಟನಾಶಕದ ಜೊತೆಗೆ ಬಯಲು ಪ್ರದೇಶದಲ್ಲಿ ಸೆಪ್ಟಂಬರ್ ತಿಂಗಳಲ್ಲಿ ಮತ್ತು ಗುಡ್ಡ ಪ್ರದೇಶದಲ್ಲಿ ಅಕ್ಟೋಬರ್ ತಿಂಗಳಲ್ಲಿ ಪ್ರತೀ ಬುಡಕ್ಕೆ ಸುರಿಯಬೇಕು. ಬೇರು ತಿನ್ನುವ ಹುಳದ ಸಂಖ್ಯೆಗನುಸಾರವಾಗಿ ಈ ಮಿಶ್ರಣವನ್ನು ಪುನಃ ಬಳಸಬಹುದು.

# ಅಡಿಕೆಯಲ್ಲಿ ಬರುವ ರೋಗಗಳು ಮತ್ತು ಅವುಗಳ ನಿರ್ವಹಣೆ

## ಅಡಿಕೆ ಕಾಯಿ ಕೊಳೆಯುವ ರೋಗ/ಕೊಳೆ ರೋಗ/ಮಹಾಳಿ



**ಲಕ್ಷಣಗಳು**

- ಮಳೆಗಾಲದಲ್ಲಿ (ಜೂನ್-ಸಪ್ಟಂಬರ್) ಅಡಿಕೆ ಕಾಯಿಗಳು ಕೊಳೆತು ಉದುರುತ್ತವೆ. ಅಡಿಕೆ ಕಾಯಿಯ ತೊಟ್ಟಿನ ಭಾಗದಲ್ಲಿ ಕೊಳೆಯುವಿಕೆ ಪ್ರಾರಂಭವಾಗಿ ನಿಧಾನವಾಗಿ ಸಂಪೂರ್ಣ ಕಾಯಿಯನ್ನು ಆವರಿಸಿ, ಕೊನೆಗೆ ಕಾಯಿ ಉದುರುತ್ತದೆ.

**ನಿರ್ವಹಣೆ**

- ಮುಂಗಾರು ಪ್ರಾರಂಭವಾಗುವ ಮುಂಚಿತವಾಗಿಯೇ (ಮೇ ಕೊನೆ ವಾರ ಅಥವಾ ಜೂನ್ ಮೊದಲ ವಾರ) ಶೇಕಡಾ 1ರ ಬೋರ್ಡೋ ಮಿಶ್ರಣವನ್ನು ಅಡಿಕೆ ಗೊನೆಗಳಿಗೆ ಸಿಂಪಡಣೆ ಮಾಡಬೇಕು. ನಂತರ ಎರಡನೇ ಸಿಂಪಡಣೆಯನ್ನು 35–45 ದಿನಗಳ ಬಳಿಕ ನೀಡಬೇಕು. ಮಳೆಗಾಲ ಮುಂದುವರೆದಿದ್ದಲ್ಲಿ, ಮೂರನೇ ಸಿಂಪಡಣೆಯನ್ನು ಮಾಡುವುದು ಆವಶ್ಯಕ. ಮಳೆ ನೀರಿಗೆ ಔಷಧವು ತೊಯ್ದು ಹೋಗದಂತೆ ಮಾಡಲು ಅಂಟನ್ನು ಉಪಯೋಗಿಸಬಹುದು. (ಬೋರ್ಡೋ ಮಿಶ್ರಣ ಸಿದ್ಧಪಡಿಸಿದ ಮೇಲೆ ಅಂಟನ್ನು ಸೇರಿಸಬೇಕು). ರೋಗ ಬಾಧಿತ ಕಾಯಿಗಳನ್ನು ಮತ್ತು ಗೊನೆಯನ್ನು ಸಂಗ್ರಹಿಸಿ ನಾಶಪಡಿಸಬೇಕು.

## ಅಣಬೆರೋಗಅಥವಾ ಬುಡ ಕೊಳೆ ರೋಗ



**ಲಕ್ಷಣಗಳು**

- ಆರಂಭದಲ್ಲಿ ಅಡಿಕೆ ಮರದ ಹೊರ ಭಾಗದ ಎಲೆಗಳು ಹಳದಿಯಾಗುವುದು, ಕ್ರಮೇಣ ಇದು ಒಳ ಭಾಗಕ್ಕೂ ಹರಡುತ್ತದೆ.
- ನೆಲದಿಂದ ಸುಮಾರು 1 ಮೀ. ಎತ್ತರದವರೆಗೆ ಕಾಂಡದ ಬುಡ ಭಾಗದಲ್ಲಿ ಚಿಕ್ಕ ಚಿಕ್ಕ ಕಳೆಗುಂದಿದ ಕಂದು ಬಣ್ಣದ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ.
- ರೋಗದ ತೀವ್ರತೆ ಹೆಚ್ಚಿರುವ ಮರದ ಬುಡ ಭಾಗದಲ್ಲಿ ಅಣಬೆಯು ಬೆಳೆಯುತ್ತವೆ. ಬೇರುಗಳು ಮತ್ತು ಕಾಂಡದ ಬುಡದ ಒಳ ಭಾಗ ಕೊಳೆಯುತ್ತದೆ.

**ನಿರ್ವಹಣೆ**

- ತೀವ್ರ ರೋಗಗ್ರಸ್ಥ ಮತ್ತು ಸತ್ತ ಮರಗಳನ್ನು ಬೇರು ಸಮೇತ ಕಿತ್ತು ಸುಟ್ಟು ಹಾಕಬೇಕು.
- ರೋಗ ಬಾಧಿತ ಮರಗಳಿಂದ ಉಳಿದ ಮರಗಳನ್ನು 30 ಸೆಂ.ಮೀ. ಅಗಲ ಹಾಗೂ 60 ಸೆಂ.ಮೀ. ಆಳದ ಕಾಲುವೆಗಳ ಮೂಲಕ ಬೇರ್ಪಡಿಸಬೇಕು. ಬೇಸಿಗೆಯಲ್ಲಿ ನಿಯಮಿತವಾಗಿ ನೀರನ್ನು ಒದಗಿಸುತ್ತಿರಬೇಕು.
- ಪ್ರತಿ ಮರಕ್ಕೆ 25 ಕಿ.ಗ್ರಾಂ. ನಷ್ಟು ಹಟ್ಟಿಗೊಬ್ಬರ ನೀಡಬೇಕು. ಟ್ರೈಕೋಡರ್ಮ ಹಾರ್ಜಿಯಾನಮ್ (ಸಿ.ಪಿ.ಸಿ.ಆರ್.ಐ. ಟಿಆರ್. 28) ಎಂಬ ಜೈವಿಕ ಶಿಲೀಂದ್ರ ನಾಶಕವನ್ನು ಬೇವಿನ ಹಿಂಡಿಯಲ್ಲಿ ಅಭಿವೃದ್ಧಿಪಡಿಸಿ ವರ್ಷಕ್ಕೆ ಪ್ರತೀ ಮರಕ್ಕೆ 2.5 ಕಿ.ಗ್ರಾಂ. ನಂತೆ ನಾಲ್ಕು ಬಾರಿ ನೀಡಬೇಕು. ಬಾಳೆ ಗಿಡಗಳನ್ನು ಅಂತರ ಬೆಳೆಯಾಗಿ ಬೆಳೆಯುವುದು.
- ಎರಡು ಮಿ.ಲೀ. ಹೆಕ್ಸಾಕೊನೊಜೋಲ್ ಅನ್ನು 100 ಮಿ.ಲೀ. ನೀರಿನಲ್ಲಿ ಬೆರೆಸಿ ಬೇರಿನ ಮುಖಾಂತರ ವರ್ಷಕ್ಕೆ ನಾಲ್ಕು ಬಾರಿ ಕೊಡಬೇಕು. ಅಲ್ಲದೆ ಸುಮಾರು 25 ಲೀ.ನಷ್ಟು ಹೆಕ್ಸಾಕೊನೊಜೋಲ್ ದ್ರಾವಣ (ಒಂದು ಲೀಟರ್ ನೀರಿಗೆ 2 ಮಿ.ಲೀ.) ಅಥವಾ 1% ಬೋರ್ಡೋದ್ರಾವಣವನ್ನು ಪ್ರತೀ ಮರದ ಬುಡಕ್ಕೆ ಸುರಿಯಬೇಕು.

## ಸುಳಿ (ತಿರಿ) ಕೊಳೆಯುವ ರೋಗ ಮತ್ತು ಚಂಡೆ ಕೊಳೆಯುವ ರೋಗ





**ಲಕ್ಷಣಗಳು**

- ಸುಳಿ ಕೊಳೆ ರೋಗ ಬಾಧಿಸಿದ ಮರದ ಸುಳಿಯು ಹಳದಿ ಬಣ್ಣಕ್ಕೆ ತಿರುಗುತ್ತ ಕ್ರಮೇಣ ತಿರಿಯು ಕೊಳೆತು, ಎಳೆದಾಗ ಸುಲಭವಾಗಿ ಹೊರ ಬರುತ್ತದೆ.
- ಅಡಿಕೆ ಮರದಲ್ಲಿ ಹಸಿರು ಎಲೆಗಳು ಜೋತು ಬಿದ್ದು, ಹಾಳೆಗಳು ಮತ್ತು ಹೊರ ಭಾಗದ ಅಡಿಕೆ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿದ್ದರೆ ಚಂಡೆ ಕೊಳೆಯುವ ರೋಗದ ಲಕ್ಷಣಗಳೆಂದು ಗುರುತಿಸಬಹುದು. ಸುಳಿ ಸಂಪೂರ್ಣವಾಗಿ ಹಾನಿಗೊಳಗಾಗುವವರೆಗೆ ಎಲೆಗಳು ಹಸಿರಾಗಿರುತ್ತವೆ. ಬೆಳೆಯುತ್ತಿರುವ ಸಿಂಗಾರವೂ ಕೊಳೆಯುತ್ತದೆ. ಕೊನೆಯ ಹಂತಗಳಲ್ಲಿ ಎಲ್ಲಾ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ, ಜೋತು ಬಿದ್ದು ಒಣಗಿದರೂ ಕೂಡಾ ಅಡಿಕೆ ಮರಕ್ಕೆ ಅಂಟಿಕೊಂಡೇ ಇರುತ್ತವೆ, ಮತ್ತು ಕಾಂಡದ ಒಳ ಭಾಗದ ಬಣ್ಣ ಬದಲಾಗಿ ಕೊಳೆಯುತ್ತದೆ. ರೋಗ ಬಾಧಿತ ಮರಗಳು ಸತ್ತು ಹೋಗುವುದಲ್ಲದೆ, ಮರದ ತುದಿ ಭಾಗವೂ ಸೋಂಕು ಇರುವ ಭಾಗದಿಂದ ಮುರಿದು ಬೀಳುತ್ತದೆ.

**ನಿರ್ವಹಣೆ**

- ಅಡಿಕೆ ತೋಟದಲ್ಲಿ ಸ್ವಚ್ಛತೆಯು ಮುಖ್ಯವಾಗಿದ್ದು, ರೋಗಾಣುವಿನ ಸೋಂಕನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಶಿಲೀಂದ್ರವು ವರ್ಷವಿಡೀ ಬದುಕಬಲ್ಲವಾದುದರಿಂದ ಅಡಿಕೆ ಕಾಯಿ ಕೊಳೆಯುವ ರೋಗಕ್ಕೊಳಗಾಗಿರುವ, ಒಣಗಿರುವ ಗೊನೆಗಳನ್ನು, ಉದುರಿರುವ ಕಾಯಿಗಳನ್ನು ಮತ್ತು ಸುಳಿ/ ಚಂಡೆ ಕೊಳೆಯುವ ರೋಗಗಳಿಗೆ ತುತ್ತಾಗಿರುವ ಚಂಡೆಗಳನ್ನು ಕಿತ್ತು ನಾಶ ಮಾಡುವುದರಿಂದ ಆರೋಗ್ಯಕರ ತೋಟವನ್ನು ನಿರ್ಮಿಸಬಹುದು.
- ರೋಗ ಬಾಧಿತ ಮರಗಳನ್ನು ಆರಂಭದಲ್ಲಿ ಉಪಚಾರ ಮಾಡುವುದರಿಂದ ಸುಳಿ/ ತಿರಿ ಕೊಳೆಯುವ ರೋಗವನ್ನು ನಿಯಂತ್ರಿಸಬಹುದು. ಅಡಿಕೆ ಚಂಡೆಯನ್ನು ಶೇಕಡಾ 1ರ ಬೋರ್ಡೋದ್ರಾವಣದಿಂದ ನೆನೆಸುವುದರಿಂದ ಮತ್ತು ರೋಗ ತಗುಲಿದ ಭಾಗವನ್ನು ಸಂಪೂರ್ಣವಾಗಿ ತೆಗೆದು ಆ ಭಾಗಕ್ಕೆ ಶೇ. 10 ರ ಬೋರ್ಡೋ ಪೇಸ್ಟ್ (ಮುಲಾಮು)ನ್ನು ಹಚ್ಚುವುದರಿಂದ ಸುಳಿ ಕೊಳೆಯುವ ರೋಗಕ್ಕೊಳಗಾಗಿರುವ ಮರಗಳನ್ನು ರಕ್ಷಿಸಬಹುದು. ಎರಡನೇ ಬಾರಿ ಬೋರ್ಡೋದ್ರಾವಣವನ್ನು ಸಿಂಪರಣೆ ಮಾಡುವಾಗ ಅಡಿಕೆ ಮರದ ಚಂಡೆಯನ್ನು ನೆನೆಸುವುದರಿಂದ ಈ ಎರಡೂ ರೋಗಗಳನ್ನು ಬಾರದಂತೆ ತಡೆಹಿಡಿಯಬಹುದು.
- ಶೇಕಡಾ 1ರಷ್ಟು ಬೋರ್ಡೋ ಮಿಶ್ರಣವನ್ನು ಬಾಧಿತ ಮರದ ಪಕ್ಕದಲ್ಲಿರುವ ಅರೋಗ್ಯವಂತ ಚಂಡೆಗಳಿಗೆ ಸಿಂಪಡಿಸುವುದರಿಂದ ಈ ರೋಗವು ಆರೋಗ್ಯವಂತ ಚೆಂಡೆಗಳಿಗೆ ಹರಡದ ಹಾಗೆ ಕಾಪಾಡಬಹುದು.

## ಸಿಂಗಾರ ಒಣಗುವುದು





**ಲಕ್ಷಣಗಳು**

- ಈ ರೋಗದ ಲಕ್ಷಣಗಳೆಂದರೆ, ಸಿಂಗಾರವು ತುದಿಯಿಂದ ಹಳದಿಯಾಗಿ ಒಣಗುತ್ತಾ ಬರುತ್ತದೆ. ನಂತರ ಹೆಣ್ಣು ಹೂಗಳು ಹಾಗೂ ಚಿಕ್ಕ ಮೊಗ್ಗುಗಳು ಉದುರುತ್ತವೆ.

**ನಿರ್ವಹಣೆ**

- ಸಂಪೂರ್ಣ ರೋಗ ತಗುಲಿದ ಸಿಂಗಾರಗಳನ್ನು ತೆಗೆದು ನಾಶಪಡಿಸಬೇಕು.
- ಹೆಣ್ಣು ಹೂ ಅರಳುವ ಸಮಯಕ್ಕೆ 1 ಲೀ ನೀರಿನಲ್ಲಿ 3 ಗ್ರಾಂ. ಮ್ಯಾಂಕೋಜೆಬ್‌ನ್ನು ಬೆರೆಸಿ 30 ದಿನಗಳ ಅಂತರದಲ್ಲಿ ಎರಡು ಬಾರಿ ಸಿಂಪಡಿಸಬೇಕು.

## ಹಳದಿ ಎಲೆ ರೋಗ



**ಲಕ್ಷಣಗಳು**

- ಈ ರೋಗ ಬಾಧಿತ ಅಡಿಕೆಯ ಮರದಲ್ಲಿ, ಎಲೆ ಹಳದಿ ಬಣ್ಣಕ್ಕೆ ತಿರುಗುವುದು ಮತ್ತು ಹೊರ ಸುತ್ತಿನ ಎಲೆಯ ತುದಿ ಭಾಗ ಮೊದಲು ಹಳದಿಯಾಗುತ್ತದೆ. ಒಮ್ಮೊಮ್ಮೆ ಮಧ್ಯ ಸುತ್ತಿನಲ್ಲಿರುವ ಎಲೆಗಳಲ್ಲೂ ಕಾಣಬಹುದು. ಆದರೆ ನಡು ದಿಂಡಿನ ಅಂಚಿನಲ್ಲಿ ಬಣ್ಣ ಮಾತ್ರ ಹಸಿರಾಗಿರುತ್ತದೆ. ರೋಗ ತೀವ್ರವಾದಂತೆ ಎಲ್ಲಾ ಎಲೆಗಳು ಹಳದಿಯಾಗಿ ಒಣಗಿ ಕೆಳಗೆ ಬೀಳುತ್ತವೆ. ಕೊನೆಗೆ ಎಲೆಗಳಿಲ್ಲದ ಕಾಂಡ ಮಾತ್ರವೇ ಉಳಿದುಕೊಳ್ಳುತ್ತದೆ. ತೀವ್ರವಾಗಿ ರೋಗಗ್ರಸ್ಥ ಮರದ ಕಾಯಿಗಳು ಸಣ್ಣದಾಗಿರುತ್ತವೆ ಮತ್ತು ಬೆಳೆಯುವ ಮೊದಲೇ ಉದುರಿ ಬೀಳುತ್ತವೆ. ಇವುಗಳ ತಿರುಳು ಮೃದುವಾಗಿದ್ದು, ಕಪ್ಪು ಬಣ್ಣಕ್ಕೆ ತಿರುಗಿ ಸಂಸ್ಕರಣೆಗೆ ಮತ್ತು ಬಳಕೆಗೆ ಸೂಕ್ತವಾಗಿರುವುದಿಲ್ಲ.

**ನಿರ್ವಹಣೆ**

- ತೀವ್ರವಾಗಿ ಬಾಧಿತವಾಗಿರುವ ಮರಗಳನ್ನು ತೆಗೆದು ನಾಶಮಾಡಬೇಕು.
- ಸರಿಯಾದ ಬಸಿಗಾಲುವೆ ವ್ಯವಸ್ಥೆಯನ್ನು ಮಾಡಬೇಕು.
- ಬೇರುಗಳ ಪುನಃ ಶ್ಚೇತನಕ್ಕಾಗಿ, ಸಸ್ಯ ಬೆಳವಣಿಗೆಯನ್ನು ಉತ್ತೇಜಿಸುವ ಬ್ಯಾಕ್ಟೀರಿಯಾ (ಪಿಜಿಪಿಆರ್) ಗಳನ್ನು ಬಳಸುವುದು ಉತ್ತಮ.
- ಟ್ರೈಕೋಡರ್ಮಾ ಮಿಶ್ರಿತ ಬೇವಿನ ಹಿಂಡಿಯ ಬಳಕೆಯಿಂದ ಬೇರು ಕೊಳೆಯುವಿಕೆಯನ್ನು ತಪ್ಪಿಸಬಹುದು. ಮಣ್ಣು ಪರೀಕ್ಷಾಆಧಾರಿತ ಪೋಷಕಾಂಶ ನಿರ್ವಹಣೆ ಮಾಡಬೇಕು ಹಾಗೂ ಬೇಸಿಗೆಯಲ್ಲಿ ನಿಯಮಿತವಾಗಿ ಮರಗಳಿಗೆ ನೀರೊದಗಿಸಬೇಕು.
- ಅಗತ್ಯಕ್ಕೆ ಅನುಸಾರವಾಗಿ ಎಲೆಗಳಿಗೆ ಪೋಷಕಾಂಶಗಳ ಸಿಂಪಡಣೆ ಮಾಡಬೇಕು ಹಾಗೂ ತೋಟದಲ್ಲಿ ಹೊದಿಕೆ/ ಮುಚ್ಚಲು ಬೆಳೆಗಳನ್ನು ಬೆಳೆಯಬೇಕು.

ವಿಷಯ ಸಂಗ್ರಹಣೆ ಮತ್ತು ಸಂಪಾದನೆ: ಡಾ. ರಾಜ್‌ಕುಮಾರ್, ಡಾ. ಎನ್. ಆರ್. ನಾಗರಾಜ, ಡಾ. ವಿ. ಹೆಚ್. ಪ್ರತಿಭಾ, ಡಾ. ವಿನಾಯಕ ಹೆಗಡೆ ಮತ್ತು ಸುರೇಖ
ಕೃಷಿ ವಿಸ್ತರಣ ಪ್ರಕಟಣೆ ಸಂಖ್ಯೆ: 274; ಪ್ರಕಾಶಕರು: ಡಾ. ಅನಿತ ಕರುಣ್, ನಿರ್ದೇಶಕರು, ಭಾ.ಕೃ.ಸಂ.ಪ.-ಕೇಂದ್ರೀಯತೋಟದ ಬೆಳೆಗಳ ಸಂಶೋಧನಾ ಸಂಸ್ಥೆ, ಕಾಸರಗೋಡು – 671 124, ಕೇರಳ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ನಿರ್ದೇಶಕರು, ಭಾ.ಕೃ.ಸಂ.ಪ.-ಕೇಂದ್ರೀಯತೋಟದ ಬೆಳೆಗಳ ಸಂಶೋಧನಾ ಸಂಸ್ಥೆ, ಕಾಸರಗೋಡು – 671 124, ಕೇರಳ